ಎಂದು ಹಟದಿಂದ ಹೇಳುತ್ತಾನೆ. ಆದರೆ ನಮ್ಮ ನಡುವೆ ಅದಾಗುತ್ತಿಲ್ಲ. ಭಾರತೀಯ ಇಂಗ್ಲಿಷ್‌ನ ಮಕ್ಕಳ ಸಾಹಿತ್ಯ ತನ್ನದೇ ಒಂದು ಲೋಕ ಎನ್ನುವಂತೆ ಪ್ರತ್ಯೇಕತೆ ಕಂಡುಕೊಳ್ಳುತ್ತ ಸಂಭ್ರಮಿಸುತ್ತಿದೆ. ಮಾರುಕಟ್ಟೆಯ ಬಲು ಸಾಹಚರ್ಯವೂ ಅವರಿಗಿದೆ. ಹಿಂದಿಯಲ್ಲಿ ಪ್ರಾದೇಶಿಕ ವಿಸ್ತಾರದಿಂದ ದೊಡ್ಡ ಸಂಖ್ಯೆಯಲ್ಲಿ ಲೇಖಕರು ಇರುವುದರಿಂದ ಅವರು ತಮ್ಮವೇ ಸಂಘಟನೆಗಳು, ವೇದಿಕೆಗಳು, ಸಂಸ್ಥೆಗಳನ್ನು ಮಾಡಿಕೊಂಡು ಅನುಕೂಲ ಮಾಡಿಕೊಂಡಿದ್ದಾರೆ. ಓರಿಯಾ ಭಾಷೆಯಲ್ಲೂ ಈ ಬಗೆಯ ಸಂಘಟನೆ ಕೆಲಸ ಮಾಡುತ್ತಿರುವುದು ಗಮನಕ್ಕಿದೆ. ಕನ್ನಡದಲ್ಲಿ ಇಷ್ಟು ವರ್ಷಗಳ ಅನುಭವದಲ್ಲಿ ಇದೆಲ್ಲ ಕನಸು ಅನಿಸಿದೆ ನನಗೆ. ಅಲ್ಲಲ್ಲಿ ಆಸಕ್ತರ ಗುಂಪುಗಳೇ ಒಂದಿಷ್ಟು ತೊಡಗಿಕೊಂಡಿರುವುದು ಕಾಣುತ್ತದೆ. ಮಕ್ಕಳ ಸಾಹಿತ್ಯದ ಅಗತ್ಯಗಳು ವಯಸ್ಕರ ಸಾಹಿತ್ಯಕ್ಕಿಂತ ಕೆಲಬಗೆಯಲ್ಲಿ ವಿಭಿನ್ನವಾಗಿವೆ. ಅವನ್ನು ನಮ್ಮ ಸಾಹಿತ್ಯಿಕ ವಲಯ ಕಣ್ತೆರೆದು ನೋಡುತ್ತಿಲ್ಲ. ಹತ್ತರಕೂಡ ಹನ್ನೊಂದು ಅನ್ನುವುದೇ ಅಲ್ಲಿನ ಸ್ಪಂದನೆ. ಹಾಗಾಗಿ ಪ್ರತ್ಯೇಕತೆಯ ಮಾತು ಅನಿವಾರ್ಯ ಅನಿಸತೊಡಗಿದೆ.

◆ **ಅಡಲ್ಟ್ ಜಗತ್ತಿನ ಕಡೆಗೆ ಲೇಖಕರಾಗಿ ನೀವು ಹೊರಳಲೇ ಇಲ್ಲ. ಆ ಬಗ್ಗೆ ಎಂದಾದರೂ ವಿಷಾದ ಅನ್ನಿಸಿದೆಯೆ? ದೊಡ್ಡವರಿಗಾಗಿ ಬರೆಯದೆ ಹೋದುದು ಕೊರತೆ ಅನ್ನಿಸಿದೆಯಾ? ಮಕ್ಕಳ ಲೇಖಕನಾಗಿ ನೀವು ಪಡೆದುದೇನು ಹಾಗೂ ಕಳೆದುಕೊಂಡುದೇನು?**

ಹೌದು, ಹಾಗೆಂದು ಆ ಬಗೆಯ ಓದು ಇಲ್ಲವೆಂದಲ್ಲ. ಅದು ಇದ್ದೇ ಇದೆ. ಕೆಲವೆಲ್ಲ ಲೇಖನಗಳು ಬಂದಿವೆ ಅಲ್ಲಲ್ಲಿ. ಕನ್ನಡದಲ್ಲಿ ವಯಸ್ಕರ ಸಾಹಿತ್ಯ ಬಲು ಹುಲುಸಿನಿಂದ ಬೆಳೆದಿದೆ. ಸಾಧ್ಯವಾದ ಓದು ನನ್ನದು ಅಷ್ಟೇ. ಸಾಹಿತ್ಯದಾಚೆಯ ಒಂದಿಷ್ಟೆಲ್ಲ ಗಂಭೀರ ಓದೂ ನನ್ನದಿದೆ. ಮಕ್ಕಳ ಸಾಹಿತ್ಯದ ಓದು, ಬರವಣಿಗೆ, ವಿಶೇಷವಾಗಿ ಎರಡು ಪತ್ರಿಕೆಯ ಕೆಲಸ ನನ್ನ ಬಹುಪಾಲು ಸಮಯ ತಿನ್ನುತ್ತಿದೆ. ವಯಸ್ಸಾಗುತ್ತಾ ಹೆಚ್ಚು ಹೊತ್ತು ಮಾಡಿಕೊಳ್ಳಲು ಆಗುತ್ತಿಲ್ಲವಾದ ಕಾರಣವೂ ಈಗೀಗ ಬೆರೆಯುತ್ತಿದೆ. ನನ್ನ ಬಹು ಮುಖ್ಯದ ಆಕರ್ಷಣೆ ಸಾಹಿತ್ಯದಾಚೆಯಿದೆ ಅಂತ ನನಗೆ ಅನಿಸಿದೆ.

◆ **ಮಕ್ಕಳಿಗಾಗಿ ಬರೆಯುವವರನ್ನು 'ಮಕ್ಕಳ ಸಾಹಿತಿ' ಎಂದು ಕರೆಯಲಾಗುತ್ತದೆ. ಈ ವಿಶೇಷಣವನ್ನು ಹೇಗೆ ನೋಡುವುದು? ಈ ಹಣೆಪಟ್ಟಿಯಿಂದ ಅನುಕೂಲವೋ ಅನನುಕೂಲವೋ?**

ಅಂಥ ಹಣೆಪಟ್ಟಿ ಅಗತ್ಯವಿಲ್ಲ. ಕೇವಲ ಮಕ್ಕಳ ಸಾಹಿತ್ಯಕ್ಕೆ ಸೀಮಿತಗೊಳ್ಳುವವರು ಅನೇಕ ಸಲ ಅದೊಂದು ಸುಲಭದ ಮಾರ್ಗ ಮಾಡಿಕೊಂಡಿರುವುದನ್ನೂ ನೋಡುತ್ತಿದ್ದೇವೆ. ಇಂಥವರ ಸಂಖ್ಯೆ ಹೆಚ್ಚೇ ಇದೆ. ಈ ಬಗೆಯ ತೊಡಗುವಿಕೆ ಇರುವಷ್ಟು ಭರವಸೆಯನ್ನೂ ಹಾಳುಮಾಡಿಬಿಡುತ್ತದೆ. ಅದಾಗದಿದ್ದರೆ ಕೇವಲ ಮಕ್ಕಳ ಸಾಹಿತ್ಯ ಎನ್ನುವ ಬರವಣಿಗೆಯಲ್ಲಿಯೇ ತೊಡಗಿ ಆನಂದ ಕಾಣುವವರನ್ನು ಹೀಗೆ ಗುರುತಿಸಿದರೆ ತಪ್ಪಿಲ್ಲ ಅನಿಸುತ್ತದೆ.

◆ **ಮಕ್ಕಳಿಗಾಗಿ ನಿರಂತರವಾಗಿ ಬರೆಯುತ್ತಲೇ ಇದ್ದೀರಿ. ಬರೆದುದು ತಲುಪಬೇಕಾದವರಿಗೆ ತಲುಪಿದೆ ಅನ್ನಿಸಿದೆಯೆ?**

ಆಸಕ್ತರು ತಮಗೆ ಇಂಥ ಊಣಿಸು ಬೇಕು ಎಂದು ಹುಡುಕಿಕೊಂಡು ಹೋಗುತ್ತಾರೆ. ಅಂಥವರ ಸಂಖ್ಯೆ ಮಕ್ಕಳ ಸಾಹಿತ್ಯದ ಸದ್ಯದ ಸಮಯದಲ್ಲಿ ಬಹಳ ಕಡಿಮೆಯಿದೆ. ಯಾರೋ ಎಲ್ಲೋ ಆಸಕ್ತಿಯಿಂದ ಓದಿದರೆ, ಇಂಥದರ ನಿರೀಕ್ಷೆಯಲ್ಲಿ ಇದ್ದವರಹಾಗೆ ಭಾವಿಸಿಕೊಂಡರೆ ಅದೇ ಒಂದು ಭಾಗ್ಯ. ಹೆಚ್ಚು ಪ್ರಚಾರಕ್ಕಿಳಿಯುವುದು ನನಗೆ ಹಿಂಜರಿಕೆ. ಹಾಗಾಗಿ ನಾನು ದೀರ್ಘ ಅವಧಿಯಲ್ಲಿ ಏನೇನು ಬರೆದಿದ್ದೇನೆ ಎನ್ನುವುದು ಬಹಳಷ್ಟು ಜನಕ್ಕೆ ಗೊತ್ತಿಲ್ಲ. ನನ್ನ ಹತ್ತಿರದ ಕೆಲ ಗೆಳೆಯರಿಗೆ ಗೊತ್ತಿದೆ, ಇರಲಿ. ನಮ್ಮ ಗ್ರಂಥಾಲಯಗಳಿಗೆ ಆಯ್ಕೆಯಾಗುವ ಪುಸ್ತಕಗಳು ದೂರದ ಅನಾಮಿಕ ಓದುಗರನ್ನ ಮುಟ್ಟುತ್ತವೆ ಅಂದುಕೊಳ್ಳುವುದು. ಆದರೆ ಗ್ರಂಥಾಲಯ ವ್ಯವಸ್ಥೆಯೂ ಚಿಂತಾಜನಕವಾಗಿದೆ. ಕಾಲಾಯ ತಸ್ಮೈ ನಮಃ

◆ **ನಿಮ್ಮ ಬರವಣಿಗೆಯಲ್ಲಿ ಬಾಲ್ಯದ ಪಾತ್ರ ಮಹತ್ವದ್ದು. ಬಾಲ್ಯ ನಿಮ್ಮನ್ನು ಅಷ್ಟೊಂದು ತೀವ್ರವಾಗಿ ಕಾಡುವುದು ಯಾಕೆ?**

ಹಾಂ, ಇರಲು ಸಾಕು. ಏಕೆಂದರೆ, ನಾನು ಪಿಎಚ್. ಡಿ., ಮಾಡುತ್ತಿದ್ದಾಗ ಮಕ್ಕಳ ಕವಿತೆಗಳ ಸಂಕಲನವನ್ನು